ಊ) ಸುಮಾರು 667 ಕ್ಯೂಸೆಕ್‌ಗಳಷ್ಟು ಹೆಚ್ಚುವರಿ ನೀರನ್ನು ಹಾಯಿಸಬಹುದು.

ಕೃಷ್ಣರಾಜಸಾಗರದ ಜಲಾಶಯದ ನೀರಾವರಿ ಬಗ್ಗೆ

1106 - ಶ್ರೀ ಎನ್. ತಮ್ಮಣ್ಣ (ಕೆರೆಗೂಡು) - ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣರಾಜಸಾಗರದ ಜಲಾಶಯ ಕಾಲುವೆಗಳು ಮತ್ತು ಅದರ ಕೆಳಭಾಗದಲ್ಲಿರುವ ನದಿ ಕಾಲುವೆಗಳಿಗೆ ಈಗ ಜಲಾಶಯದ ಸಂಗ್ರಹಣೆಯಿಂದ ಮುಂಗಾರು ಮತ್ತು ಹಿಂಗಾರು ಬೆಳೆಗೆ ಒದಗಿಸುತ್ತಿರುವ ನೀರಿನ ಪ್ರಮಾಣವೆಷ್ಟು;

ಆ) ಕೃಷ್ಣರಾಜಸಾಗರದ ಜಲಾಶಯದಲ್ಲಿ ಮುಂಗಾರು ಮತ್ತು ಹಿಂಗಾರು ಬೆಳೆಗಳಿಗೆ ನೀರು ಕೊಟ್ಟ ನಂತರ ಡಿಸೆಂಬರ್ ಅಥವಾ ಜನವರಿ ಮೊದಲನೇ ವಾರದಲ್ಲಿ ಕಟ್ಟೆಯಲ್ಲಿ ಉಳಿಯುವ ನೀರಿನ ಪ್ರಮಾಣವೆಷ್ಟು?

ಇ) ಜನವರಿ ಮೊದಲನೇ ವಾರದಲ್ಲಿ ಜಲಾಶಯದಲ್ಲಿ ಉಳಿಯುವ ನೀರಿನ ಪ್ರಮಾಣದಲ್ಲಿ ಬೇಸಿಗೆ ಸಮಯದಲ್ಲಿ ಕೃಷ್ಣರಾಜಸಾಗರದ ಜಲಾಶಯದ ಅಚ್ಚುಕಟ್ಟು ಪ್ರದೇಶಕ್ಕೆ ಮಾಮೂಲು ನೀರು ಸರಬರಾಜಾಗುವುದೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಕಾವೇರಿ ನೀರಿನ ವಿವಾದವು ನ್ಯಾಯಮಂಡಳಿ ಮುಂದೆ ಇರುವುದರಿಂದ ಈ ಪ್ರಶ್ನೆಗಳಿಗೆ ಮಾಹಿತಿ ಕೊಡುವುದು ಸೂಕ್ತವಲ್ಲ.

ಇ) ಹೌದು.

ಸಣ್ಣ ಉಳಿತಾಯ ಯೋಜನೆಯಲ್ಲಿ ಸಂಗ್ರಹಿಸಿರುವ ಹಣ

236 - ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) - ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಣ್ಣ ಉಳಿತಾಯ ಯೋಜನೆ ಕಾರ್ಯಕ್ರಮದಡಿಯಲ್ಲಿ ಕಳೆದ ಮೂರು ವರ್ಷದಿಂದ ಸಂಗ್ರಹಿಸಲಾಗಿರುವ ಹಣವೆಷ್ಟು?; (ವರ್ಷವಾರು ವಿವರವನ್ನು ಕೊಡುವುದು)

ಆ) ಸಣ್ಣ ಉಳಿತಾಯದ ಆಂದೋಲನಕ್ಕೆ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):

ಅ) ನಿಗದಿಮಾಡಿದ ಗುರಿ ಸಾಧಿಸಲಾದ ಪ್ರಗತಿ

ವರ್ಷ	ಗುರಿ		ಪ್ರಗತಿ (ರೂ. ಕೋಟಿಗಳಲ್ಲಿ)	
	ಒಟ್ಟು	ನಿವ್ವಳ	ಒಟ್ಟು	ನಿವ್ವಳ
1987-88	600.00	355.00	603.03	257.18
1988-89	700.00	350.00	732.83	305.58
1989-90	700.00	350.00	972.69	469.59

ಆ)

1) ವಿವಿಧ ವಿನಿಮಯೋಗಗಳ ಬಹುಮಾನ ಯೋಜನೆ.
2) ಅಧಿಕೃತ ಏಜೆಂಟರುಗಳ ಸ್ಪರ್ಧಾ ಯೋಜನೆ.
3) ಸಂಘ ಸಂಸ್ಥೆಗಳಿಗೆ ಪ್ರೋತ್ಸಾಹಕ ಬಹುಮಾನ ಯೋಜನೆ.
4) ವಿಶೇಷ ಸಣ್ಣ ಉಳಿತಾಯ ಆಂದೋಲನ.